ಅ.ದಾ. ನಂ. 446/2019
ಪಿಡಬ್ಲೂ ಃ 1

ಸಾಕ್ಷಿಯನ್ನು ಇಂದು ದಿನಾಂಕ 09.01.2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಃ ಶ್ರೀ. ಆರ್ ವಿ ಜಿ ವಕೀಲರಿಂದ</u>

ನನಗೆ ಸದರಿ ದಾವೆಯಲ್ಲಿ ಯಾರ ಮೇಲೆ ಯಾವ ಪರಿಹಾರಕ್ಕೆ ಹಾಕಿರುತ್ತೇನೆ ಎಂಬ ಮಾಹಿತಿ ಇರುತ್ತದೆ. ನಾನು ಸದರಿ ದಾವೆಯಲ್ಲಿ ವಸಂತ ಶಿವಣ್ಣ ಒನರೊಟ್ಟಿ ಮೇಲೆ ಹೂಡಿರುತ್ತೇನೆ. ಹಾಗೇ ನನ್ನ ತಂದೆಯವರ ಸೌಲಭ್ಯವನ್ನು ಕೋರಿ ಸದರಿ ದಾವೆಯನ್ನು ಮಾಡಿರುತ್ತೇನೆ. ನಾನು ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯು ನನ್ನ ತಂದೆಯವರ ಕಾನೂನು ಬದ್ಧ ಹೆಂಡತಿ ಅಲ್ಲ ಎಂದು ಘೋಷಣೆಯನ್ನು ಕೇಳಿರುವುದಿಲ್ಲ. ವಾದ ಪತ್ರದ ಶಿರ್ಷಿಕೆಯಲ್ಲಿ 1 ನೇ ಪ್ರತಿವಾದಿಯು ನನ್ನ ತಂದೆಯ ಹೆಂಡತಿ ಎಂದು ತನ್ನಷ್ಟಕ್ಕೆ ತಾನು ಕರೆದುಕೊಂಡಿರುತ್ತಾರೆ ಎಂಬುವುದರ ಬಗ್ಗೆ ನಮೂದು ಇದೆಯೋ ಇಲ್ಲೋ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿಯ ಹೆಸರು ಭೀಮವ್ವ. ದಾವೆಯ ಕೊಡುವಾಗ ನನ್ನ ಅಜ್ಜಿಯು ಇದ್ದರು. ದಾವೆ ಹೂಡುವಾಗ ನನ್ನ ಅಜ್ಜಿಯನ್ನು ಪಕ್ಷಗಾರರನಾಗಿ ಯಾಕೆ ಮಾಡಿಕೊಂಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಮಾಡಿ ಕೊಡಲು ಆಗಲಿಲ್ಲ ಮಾಡಿಕೊಳ್ಳುವಷ್ಟರಲ್ಲಿ ನನ್ನ ಅಜ್ಜಿಯು ಕರೋನಾನಿಂದ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿಯವರಿಗೆ 1 ನೇ ಪ್ರತಿವಾದಿಗೆ ನನ್ನ ತಂದೆಯವರನ್ನು ಮದುವೆ ಆಗಿದರ ಬಗ್ಗೆ ಮಾಹಿತಿ ಇದ್ದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿಯವರು ಅದರ ಕುರಿತು ನನಗೆ ಏನೂ ಹೇಳಿರುವುದಿಲ್ಲ. ನನ್ನ ತಾಯಿ ತೀರಿಕೊಂಡ ನಂತರ ನಾನು ಬಿವಿಬಿ ಕಾಲೇಜಿನ ಹಾಸ್ಟೇಲ್‌ನಲ್ಲಿ ಇದ್ದೇವು. ಅವಾಗವಾಗ ನಮ್ಮ ಊರಿಗೆ ಬಂದು ಹೋಗುತ್ತಿದ್ದೆ. ನಾನು ಅವಾಗವಾಗ ಊರಿಗೆ ಬಂದಾಗ ನಾನು ಹಾಗೂ ತಂದೆಯವರು ಇರುತಿದ್ದೇವು. ನಾನು ಆಲಮೇಲ್ ಹಾಗೂ ಇಂಗಳೇಶ್ವರಕ್ಕೆ ಎರಡು ಊರಿಗೆ ಹೋಗುತ್ತಿದ್ದೆ ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಆಲಮೇಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಿದ್ದರು. ನನ್ನ ತಾಯಿಯ ಮರಣ ನಂತರ ನನ್ನ ತಂದೆಯು 1 ನೇ ಪ್ರತಿವಾದಿಯು ಒಡನೆ ದಿನಾಂಕಃ 25.08.2016 ರಂದು ಇಂಗಳೇಶ್ವರದಲ್ಲಿರುವ ಮನೆಯ ಮುಂದೆ ಮದುವೆ ಆದರೂ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ನಾನು ಹಾಸ್ಟೇಲ್‌ನಲ್ಲಿ ಇದ್ದರು ಎಂದರು ನುಡಿಯುತ್ತಾರೆ. ಸದರಿ ಮದುವೆಯಲ್ಲಿ ನನ್ನ ಅಜ್ಜಿ ಹಾಗೂ ಇಂಗಳೇಶ್ವರ ಊರಿನ ಊರು ಹಿರಿಯರು ಉಪಸ್ಥಿತರು ಇದ್ದರು ಎಂದು ನನಗೆ ಗೊತ್ತಿಲ್ಲ. ದಿನಾಂಕಃ 25.08.2016 ರಂದು ಮದುವೆ ಆದ ನಂತರ ನನ್ನ ತಂದೆ ಹಾಗೂ 1 ನೇ ಪ್ರತಿವಾದಿಯು ಉಪನೋಂದನಾಧಿಕಾರಿ ಕಛೇರಿಯಿಂದ ಮದುವೆ ಪ್ರಮಾಣ ಪತ್ರ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮದುವೆ ಆದ ನಂತರ ನನ್ನ ತಂದೆ ಹಾಗೂ 1 ನೇ ಪ್ರತಿವಾದಿಯ ಆಲಮೇಲ್‌ನಲ್ಲಿ ಜೀವನ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 03.04.2017 ರಂದು ನನ್ನ

ತಂದೆಯವರು ಇಲಾಖೆಗೆ ಒಂದು ಶಪತ ಪತ್ರ ನೀಡಿ ಅದರಲ್ಲಿ ಮೊದಲನೇ ಹೆಂಡತಿ ಮೃತವಾಗಿದ್ದು 1 ನೇ ಪ್ರತಿವಾದಿ ಒಡನೆ ಮದುವೆ ಆಗಿದೆ ಎಂದು ಸೇವಾ ಪುಸ್ತಕದಲ್ಲಿ ನಮೂದುವಾಗಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ  ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಕಾಲಾವಕಾಶ ಕೋರಿದ್ದು ಮುಂದುಡಲಾಯಿತು.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಬಸವನ ಬಾಗೇವಾಡಿ.